International Journal of Kannada Research
www.kannadajournal.com

ISSN: 2454–5813
IJKR 2022; 8(4): 21-24
© 2022 IJKR
www.kannadajournal.com
Received: 11-08-2022
Accepted: 14-09-2022

**ಡಾ. ಚಂದ್ರಕಲಾ ವಿ.ಸಿ**
ಅತಿಥಿ ಉಪನ್ಯಾಸಕರು,
ಕನ್ನಡ ವಿಭಾಗ,
ಸ್ನಾತಕೋತ್ತರ ಕೇಂದ್ರ,
ಹೇಮ ಗಂಗೋತ್ರಿ, ಹಾಸನ,
ಕರ್ನಾಟಕ, ಭಾರತ

Corresponding Author:
**ಡಾ. ಚಂದ್ರಕಲಾ ವಿ.ಸಿ**
ಅತಿಥಿ ಉಪನ್ಯಾಸಕರು,
ಕನ್ನಡ ವಿಭಾಗ,
ಸ್ನಾತಕೋತ್ತರ ಕೇಂದ್ರ,
ಹೇಮ ಗಂಗೋತ್ರಿ, ಹಾಸನ,
ಕರ್ನಾಟಕ, ಭಾರತ

# ಶಾಂತಲಾ ಕಾದಂಬರಿಯಲ್ಲಿನ ಶಾಂತಲಾ ಪಾತ್ರ ಒಂದು ವಿವೇಚನೆ

## ಡಾ. ಚಂದ್ರಕಲಾ ವಿ.ಸಿ

ಕಾದಂಬರಿಯಲ್ಲಿ ವಿಷ್ಣುವರ್ಧನನ ಪಟ್ಟದ ರಾಣಿಯಾದ ನಂತರ ಶಾಂತಲೆಯ ಪಾತ್ರಕ್ಕೆ ಪ್ರಾಮುಖ್ಯತೆ ಸಿಕ್ಕಿದೆ. ಶಾಂತಲೆಯ ಪಾತ್ರವನ್ನು ಒಟ್ಟಾರೆಯಾಗಿ ಗಮನಿಸಿದಾಗ ಕಂಡುಬರುವ ಮುಖ್ಯವಾದ ಭಾವ ವಾತ್ಸಲ್ಯ. ಆದರೆ ಅದನ್ನು ಅಭಿವ್ಯಕ್ತಿಸುವ ರೀತಿ ಮಾತ್ರ ಭಿನ್ನವಾಗಿದೆ.

ಸವತಿಯರ ನಡುವೆ ಬದುಕುತ್ತಿದ್ದರು ಅವಳ ಬಾಳಿನಲ್ಲಿ ಸವತಿ ಮತ್ಸರವಿರಲಿಲ್ಲ. ಶಾಂತಲೆಯ ಬಾಳಿನಲ್ಲಿ ಬೆಳಕನ್ನು ತುಂಬಿ ಚೈತನ್ಯವಾಗಿಸಿದವನು ವಿಷ್ಣುವರ್ಧನ. ಆದರೆ ಅವಳಿಗೆ ಮಕ್ಕಳಿಲ್ಲವೆಂಬ ಕೊರಗುವುಂಟಾಗಿ, ಅದಕ್ಕಾಗಿ ತನ್ನ ಸ್ಥಾನವನ್ನೇ ಪಾಲು ಮಾಡಿಕೊಳ್ಳಲು ಹೊರಟಿದ್ದು ಮತ್ತು ಹೊಯ್ಸಳ ಸಾಮ್ರಾಜ್ಯದ ಉತ್ತರಾಧಿಕಾರಕ್ಕಾಗಿ ತ್ಯಾಗಕ್ಕೆ ಸಿದ್ಧಳಾದ ಅವಳ ಅಳಲನ್ನು ವರ್ಣಿಸಲಸದಳ. ಶಾಂತಲೆಯ ಔದಾರ್ಯ ಮತ್ತು ಅಂತಃಕರಣದ ಮುಂದೆ ವಿಷ್ಣುವರ್ಧನ ಕುಗ್ಗಿಹೋಗುತ್ತಾನೆ. ಇಲ್ಲಿ ನಮಗೆ ಶಾಂತಲೆಯ ಅಂತಃಕರಣ ಹೃದಯ ಪರಿಚಯವಾಗುತ್ತದೆ.

ಕೆ.ವಿ. ಅವರ ಶಾಂತಲೆ ವಿಶಾಲ ಮನೋಭಾವದವಳು. ಹೊಯ್ಸಳ ರಕ್ತ ಬೆಳೆಯಬೇಕೆಂಬ ಸದುದ್ದೇಶದಿಂದ ವಿಷ್ಣುವರ್ಧನನನ್ನು ಅಗಲುತ್ತಾಳೆ. ಇವಳ ಮರಣ ನಂತರ ವಿಷ್ಣುವರ್ಧನನ ನರಳಾಟ, ಗೋಳಾಟ ಕಂಡು ಆತ್ಮದ ರೂಪದಲ್ಲಿ ಅವನನ್ನು ಸೇರಿದ ವಾತ್ಸಲ್ಯ ಪೂರಿತ ಹೆಂಡತಿಯಾಗಿ ಕಂಡುಬರುತ್ತಾಳೆ.

ತಾಯಿಯಿಲ್ಲದ ಲಕ್ಷ್ಮೀಗೆ ಶಾಂತಲೆ ಅಕ್ಕನ ಸ್ಥಾನವನ್ನು ತುಂಬಿದ್ದಳು, ಅಂತರಂಗದ ಗೆಳತಿಯಾಗಿದ್ದಳು, ಅವರಿಬ್ಬರಲ್ಲಿ ಬೇಧಭಾವವಿರಲಿಲ್ಲ, ಲಕ್ಷ್ಮೀಯ ಅಂತರಂಗದ ರೂಪವನ್ನು ಇಷ್ಟಪಟ್ಟ ಕಾರಣ ಶಾಂತಲೆ–ಲಕ್ಷ್ಮೀ ಇಬ್ಬರೂ ವಿಷ್ಣುವರ್ಧನನನ್ನು ವಿವಾಹವಾಗಲು ಸಾಧ್ಯವಾಗಿದ್ದು, ಇಲ್ಲಿ ಎದ್ದುಕಾಣುವುದು ಲಕ್ಷ್ಮೀಯ ಮೇಲಿದ್ದ ಅತಿಯಾದ ವಿಶ್ವಾಸ ಮತ್ತು ನಂಬಿಕೆ. ಮುಂದೆ ಶಾಂತಲೆ ಲಕ್ಷ್ಮೀಯನ್ನು ನಡೆಸಿಕೊಂಡ ರೀತಿ ವಿಶಿಷ್ಟವಾದದ್ದು.

ಶಾಂತಲೆಯ ಮರಣ ನಂತರ ವಿಷ್ಣುವರ್ಧನನ ನರಳಾಟ ಕಂಡು ಶಾಂತಲೆಯ ಆತ್ಮ ಲಕ್ಷ್ಮೀಯ ದೇಹವನ್ನು ಪ್ರವೇಶ ಮಾಡಿ ಅವನ ಹತ್ತಿರ ಓಡಿ ಬರುತ್ತದೆ. ಇಲ್ಲಿ ಗಂಡನ ಮೇಲೆ ಶಾಂತಲೆಯ ನಿಜವಾದ ಅಂತಃಕರಣ ಇರುವುದು ವಿದಿತವಾಗುತ್ತದೆ. ಶಾಂತಲೆಯ ಮರಣ ನಂತರ ಮತ್ತು ಮರಣಕ್ಕೂ ಮೊದಲು ಶಾಂತಲೆ ವಿಶೇಷ ಪ್ರೀತಿಯಿಂದ ವಿಷ್ಣುವರ್ಧನನನ್ನು ಕಂಡಿದ್ದಾಳೆ, ಆದರಿಸಿದ್ದಾಳೆ, ಆತ್ಮದ ರೂಪದಲ್ಲಿ ಬಂದ ಶಾಂತಲೆ ಗಂಡನ ಯೋಗಕ್ಷೇಮವನ್ನು ವಿಚಾರಿಸುತ್ತಾಳೆ. ಶಾಂತಲೇ ಆಗಲೇ ಪಶ್ಚಾತ್ತಾಪದಿಂದ ಬಳಲಿರುತ್ತಾಳೆ. ಗಂಡನಲ್ಲಿ ಕ್ಷಮೆಯಾಚಿಸುತ್ತಾಳೆ. ಇಷ್ಟೆಲ್ಲಾ ದುರಂತಕ್ಕೆ ತಾನು ಕಾರಣಳು ಎಂದು ಕೊರಗುತ್ತಾಳೆ. ರಾಜಮಾತೆಗೆ ಕೊಟ್ಟ ವಚನ ಪಾಲನೆಗಾಗಿ ಪರಿತಪಿಸುತ್ತಾಳೆ. ಅದನ್ನು ಈಡೇರಿಸಲು ಪ್ರಯತ್ನಪಟ್ಟು ಎಲ್ಲಾ ಆಯ್ಕೆಗಳು ವಿಫಲವಾದಾಗ ಅವಳು ಕುಗ್ಗಿಹೋಗುತ್ತಾಳೆ. ಗಂಡನ ಪ್ರೀತಿ, ಲಕ್ಷ್ಮೀಯ ವಿಧೇಯತೆ, ಕುವರನ ವರ್ತನೆ ಇವುಗಳಿಂದ ಬಿಡಿಸಿಕೊಂಡು ಹೊಯ್ಸಳ ಸಾಮ್ರಾಜ್ಯದ ಪ್ರಜೆಗಳ ಹಿತರಕ್ಷಣೆಗಾಗಿ ತನ್ನ ಅಂತ್ಯವನ್ನು ಕಂಡುಕೊಂಡಿದ್ದು, ಅವಳ ಮಹೋನ್ನತವಾದ ತ್ಯಾಗಕ್ಕೆ ಪ್ರತೀಕವಾಗಿದೆ.

ಕುವರ ವಿಷ್ಣುವನ್ನು ಹೊಯ್ಸಳ ಸಾಮ್ರಾಜ್ಯದ ಯುವರಾಜನನ್ನಾಗಿ ನೇಮಿಸಲು ಆಲೋಚಿಸುವುದು ಶಾಂತಲೆ ಅವನ ಮೇಲೆಟ್ಟಿದ್ದರ ಅಭಿಮಾನದ ಪ್ರತೀಕವಾಗಿದೆ. ಕುವರನು ಶಾಂತಲೆಯೊಂದಿಗೆ ಅಸುನೀಗುವುದನ್ನು ಗಮನಿಸಿದರೆ ಕುವರನಿಗೆ ಅವಳು ತೋರಿರುವ ಪ್ರೀತಿ ವಿಶ್ವಾಸಗಳ ಅಧಿಕೃತೆಗೆ ಸಾಕ್ಷಿಯಾಗಿದೆ.

ಶಾಂತಲೆ ತನ್ನ ವಚನ ಪರಿಪಾಲನೆಯಿಂದ ವಿಮುಕ್ತಳಾಗುವ ಶಕ್ತಿಯಿಲ್ಲದವಳಾಗಿ ತನ್ನ ಅಂತರಂಗದ ತೊಳಲಾಟಗಳನ್ನು ಗಂಡನ ಮುಂದೆ ಬಹಿರಂಗಗೊಳಿಸುತ್ತಾಳೆ. ವಚನ ಪಾಲನೆಗಾಗಿ ಅವಕಾಶ ನೀಡಬೇಕಾಗಿ ಅವನಲ್ಲಿ ಬೇಡಿಕೊಳ್ಳುತ್ತಾಳೆ. ಆದರೆ ವಿಷ್ಣುವರ್ಧನ ಅವಳನ್ನು ಪ್ರೀತಿಯಿಂದ ಅಪ್ಪಿಕೊಂಡು ಅವಳ ಬೇಡಿಕೆಯನ್ನು ನಿರಾಕರಿಸುತ್ತಾನೆ. ಅವನಿಂದ ಅದನ್ನು ನಿರೀಕ್ಷಿಸದ ಶಾಂತಲೆ ತನ್ನ ಅಂತ್ಯದ ಬಗ್ಗೆ ಆಲೋಚನೆಗೆ ಮುಂದಾಗುತ್ತಾಳೆ.

ಕೊನೆಯ ಆಸೆ ಮತ್ತು ಆಸರೆಯಾಗಿದ್ದ ಕುವರ ವಿಷ್ಣುವು ಗರುಡನಾಗುತ್ತಾನೆ. ಅವನ ಔದಾರ್ಯಕ್ಕೆ ಮನಸೋತ ಶಾಂತಲೆ ಅವನ ಒಳನೋಟವನ್ನು ಗ್ರಹಿಸಿ ತನ್ನ ಅಂತ್ಯಕ್ಕೆ ಮುನ್ನುಡಿ ಬರೆಯುತ್ತಾಳೆ. ಆದರೆ ಅವಳೊಂದಿಗೆ ಕುವರನು ಸಾವನ್ನಪ್ಪುವುದು ದುರ್ದೈವ.

'ಶಾಂತಲಾ' ಕಾದಂಬರಿಯಲ್ಲಿ ಸವತಿ ಮಾತ್ಸರ್ಯಕ್ಕೆ ಸ್ಥಾನವಿಲ್ಲ. ಶಾಂತಲೆ ಸ್ವತಃ ಯಾರನ್ನು ಶೋಷಿಸಿಲ್ಲ ಅಥವಾ ಇತರರಿಂದಲೂ ಶೋಷಣೆಗೆ ಗುರಿಯಾಗಿಲ್ಲ. ಬದಲಾಗಿ ಶಾಂತಲೆ ಸವತಿಯರ ಬಗ್ಗೆ ಮರುಕ ಪಟ್ಟಿರುವ ಸಂದರ್ಭವುಂಟು. ಆದರೆ ತನ್ನ ವಚನ ಪಾಲನೆಗಾಗಿ ತನಗೆ ಮಕ್ಕಳಾಗಲಿಲ್ಲವೆಂದು ಅವಳು ಅನುಭವಿಸಿದ ಮನೋವೇದನೆಯ ಸೂಚನೆಗಳು ದೊರೆಯುತ್ತವೆ. ಮಾನವೀಯ ಅನುಕಂಪ ಮತ್ತು ಸಂವೇದನೆಗಳ ಪ್ರತೀಕವಾದ ಶಾಂತಲೆ ಲಕ್ಷ್ಮಿಯ ಮೂಲಕ ತನ್ನ ವಚನ ಪಾಲನೆ ಈಡೇರಬೇಕೆಂಬ ಉದ್ದೇಶದಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ನಂತರ ಆತ್ಮದ ರೂಪದಲ್ಲಿ ಬಂದ ಶಾಂತಲೆಯ ಆಗಮನ ವಿಷ್ಣುವರ್ಧನನ ಬಾಳಲ್ಲಿ ಹೊಸ ಚೇತನವನ್ನು ಮೂಡಿಸುತ್ತದೆ. ಈ ಮೂಲಕ ಆ ದಂಪತಿಗಳಿಗೆ ಇದುವರೆಗೂ ಇಲ್ಲದ ಮನಸ್ಸಮಾಧಾನ ದೊರಕುತ್ತದೆ.

ಶಾಂತಲೆಯ ಅಪರಾಧಿ ಮನಸ್ಸು ವಿಷ್ಣುವರ್ಧನನ ಅಗಲಿಕೆಯಿಂದ ಮಾಗಿತ್ತು. ಅವಳು ಅಪರಾಧಿ ಪ್ರಜ್ಞೆಯಿಂದ ಮುಕ್ತಳಾಗಿ ಪಶ್ಚಾತ್ತಾಪಪಟ್ಟು ಆತ್ಮದ ರೂಪದಲ್ಲಿ ಬಂದಿದ್ದು ಮತ್ತು ತನ್ನ ಗಂಡನೊಂದಿಗೆ ಸೇರಲು ತವಕಿಸಿದ್ದು ಗಮನೀಯವಾಗಿದೆ. ಹೊಯ್ಸಳ ಸಾಮ್ರಾಜ್ಯದ ಅಭಿವೃದ್ಧಿಗೆ ಶಾಂತಲೆಯೇ ಕಾರಣಳೆಂದು ಹೇಳಿ ಅವಳಿಗೆ ವಿಶೇಷ ಮನ್ನಣೆಯನ್ನು ಒದಗಿಸಿ ಕೊಟ್ಟಿದ್ದಾರೆ. 'ಹೊಯ್ಸಳರ ರಕ್ತ ಬೆಳೆಯಗೊಡಲಿಲ್ಲ' ಎಂಬ ಕಳಂಕವನ್ನು ನಿವಾರಿಸಿದ್ದಾರೆ. ಆದರೆ ಶಾಂತಲೆ ಈ ವಿಷಯದಲ್ಲಿ ವಿಷ್ಣುವರ್ಧನನನ್ನು ಅರ್ಥಮಾಡಿಕೊಳ್ಳದಿರುವುದು ದುರಂತ. ಅವಳು ತನ್ನ ಕಾರ್ಯಕ್ಕೆ ಸಂತೋಷ ಪಡುತ್ತಾನೆಂದುಕೊಂಡಿರುತ್ತಾಳೆ. ಆದರೆ ಅವನಿಗೆ ಹೊಯ್ಸಳ ಸಾಮ್ರಾಜ್ಯಕ್ಕಿಂತ ತನ್ನ ಹೆಂಡತಿಯ ಮೇಲಿನ ಪ್ರೀತಿಯೇ ತೀವ್ರವಾಗಿರುತ್ತದೆ. ಹಾಗಾಗಿ ಶಾಂತಲೆ ಈ ವಿಷಯದಲ್ಲಿ ಸೋಲುತ್ತಾಳೆ. ಆದರೆ ವಿಷ್ಣುವರ್ಧನನ ಕೀರ್ತಿವರ್ಧನಕ್ಕೆ ಮೂಲ ಕಾರಣವಾಗುತ್ತಾಳೆ ಇಲ್ಲಿ ಎಲ್ಲರಿಗೂ ಒಳಿತಾಗಲಿ ಎಂದು ಹಾರೈಸುವ ಏಕೈಕ ಜೀವ ಶಾಂತಲೆಯಾಗಿದ್ದಾಳೆ.

ಶಾಂತಲೆಗೆ ಬಹುಶಃ ತನ್ನ ಮನದ ಭಾವನೆಗಳನ್ನು, ಅನಿಸಿಕೆಗಳನ್ನು ಹೇಳಲು ವಿಷ್ಣುವರ್ಧನ ಮತ್ತು ಕುವರನ ಪ್ರೀತಿಯಿಂದ ಅವಕಾಶವೇ ಸಿಗಲಿಲ್ಲ. ಹಾಗಾಗಿ ಅವಳ ಸಾವೇ ಆ ಮೂಲಕ ಅನೇಕ ಅರ್ಥಗಳನ್ನು ಧ್ವನಿಸುತ್ತದೆ. ಆತ್ಮದ ರೂಪದಲ್ಲಿ ಹೊರಬಂದ ಶಾಂತಲೆಯನ್ನು ಕಂಡ ವಿಷ್ಣುವರ್ಧನ ಪರಸ್ಪರ ಪ್ರೇಮಕ್ಕೆ ಶರೀರ ಮುಖ್ಯವಲ್ಲ, ಮನಸ್ಸು ಮುಖ್ಯ ಎಂಬುದನ್ನು ಪ್ರತಿಪಾದಿಸುತ್ತಾನೆ. ಇಲ್ಲಿ ಇವರ ಅವಿನಾಭಾವ ಸಂಬಂಧ ವ್ಯಕ್ತವಾಗುತ್ತದೆ.

ಶಾಂತಲೆ ಹೊಯ್ಸಳ ಸಾಮ್ರಾಜ್ಯದ ಭವಿಷ್ಯದ ಬಗೆಗೆ ಚಿಂತಿತಳಾಗಿ, ತಾನು ಬಂಜೆಯೆಂಬ ಉಭಯ ಸಂಕಟದಿಂದ ವಜ್ರ ಕಠೋರ ಹೃದಯಿಯಾಗುತ್ತಾಳೆ. ತನ್ನ ಗಂಡನ ಪ್ರೀತಿ ಒಂದು ಕಡೆಯಾದರೆ ಇನ್ನೊಂದು ಕಡೆ ರಾಜ್ಯದ ಭವಿಷ್ಯ, ಧರ್ಮವನ್ನು ಉಳಿಸುವುದಕ್ಕಾಗಿ ತಾನೇ ಅಂತ್ಯವಾಗುತ್ತಾಳೆ. ವಿಷ್ಣುವರ್ಧನನನ್ನು ಬಂಧಿಸಿದ ಕೊಂಡಿ ಎಂದರೆ ಶಾಂತಲೆ ಎಂಬುದು ಬಹುಶಃ ತಪ್ಪಾಗಲಾರದು. ಸದಾ ನಗುಮೊಗದ ಶಾಂತಲೆಯಲ್ಲಿ ಯಾರಲ್ಲೂ ಹೇಳಿಕೊಳ್ಳಲಾರದ ನೋವು ತುಂಬಿಕೊಂಡಿದೆ. ಆದರೂ ಶಾಂತಲೆ ಎಲ್ಲರೊಂದಿಗೆ ಪ್ರೀತಿಪಾತ್ರಳಾಗಿ ವಾತ್ಸಲ್ಯಭರಿತ ಸಂಬಂಧ ಹೊಂದಿರುವುದು ಕಂಡುಬರುತ್ತದೆ.

ಶಾಂತಲೆಯ ನಿಷ್ಠೆ, ಧರ್ಮದ ಮೇಲಿರುವ ನಂಬಿಕೆ, ಪ್ರೀತಿ, ಸೂಕ್ಷ್ಮವಾಗಿ ಎಲ್ಲವನ್ನು ಅವಲೋಕಿಸುವಿಕೆ, ಇನ್ನೊಬ್ಬರ ಮೇಲೆ ತನ್ನ ವ್ಯಕ್ತಿತ್ವದ ಪ್ರಭಾವ ಬೀರುವಿಕೆ ಹಾಗೂ ಅವಳಿಗೆ ಎಲ್ಲಾ ಕಡೆ ಸಿಗುವ ಮಾನ್ಯತೆ ಇಲ್ಲಿ ಸೊಗಸಾಗಿ ಮೂಡಿಬಂದಿದ್ದು ಶಾಂತಲೆಯ ಪಾತ್ರಕ್ಕೆ ಮತ್ತಷ್ಟು ಮೆರಗು ನೀಡುತ್ತದೆ. ತನ್ನ ದುಃಖ ಬೆಟ್ಟದಷ್ಟಿದ್ದರೂ ಪರರ ಸುಖಕ್ಕೆ ಮರುಗುವ ಸ್ವಭಾವದವಳು ಎಂದು ಗುರುತಿಸಬಹುದು. ತನ್ನ ಸವತಿಯರ ಮಕ್ಕಳಿಗೆ ಹೊಯ್ಸಳ ಸಿಂಹಾಸನ ಮತ್ತು ಸವತಿಗೆ ಹೊಯ್ಸಳ ಸಿಂಹಾಸನ ಮತ್ತು ಪಟ್ಟದರಾಣಿ ಸ್ಥಾನ ಸಿಗಬೇಕೆಂದು ತಾನೇ ನಾಶವಾಗುವುದು ಅವಳ ನಿಸ್ವಾರ್ಥತೆಯನ್ನು ಸಾದರಪಡಿಸುತ್ತದೆ. ಇಲ್ಲಿ ಇವಳಿಗೆ ತಾನು ಅಂತ್ಯವಾದದು ಮುಖ್ಯವಲ್ಲ, ಹೊಯ್ಸಳ ರಾಜ್ಯದ ಭವಿಷ್ಯವೇ ಮುಖ್ಯವಾಗುತ್ತದೆ. ಇಲ್ಲಿ ಶಾಂತಲೆಯ ದೃಷ್ಟಿ ವಿಶಾಲವೂ, ವ್ಯಾಪಕವೂ ಆಗಿದೆ. ಹೊಯ್ಸಳ ರಾಜ್ಯದ ಏಳಿಗೆಯನ್ನು ಬಯಸುವ ಮಹಾನ್ ಚೇತನವಾಗಿ ಕಂಡುಬರುತ್ತಾಳೆ. ಎಲ್ಲರ ಹೃದಯಗಳನ್ನು ಪ್ರೀತಿಯಿಂದ, ಸ್ನೇಹದಿಂದ, ಸರಳತೆಯಿಂದ, ನೇರನಿಷ್ಕಪಟ ನಡೆ–ನುಡಿಯಿಂದ, ಸಮಯ ಪ್ರಜ್ಞೆಯಿಂದ, ಧರ್ಮದೃಷ್ಟಿಯಿಂದ ಎಲ್ಲ ಸಂದರ್ಭಗಳಲ್ಲಿ ಬೇಕಾದವಳಾಗಿ ಕಂಡುಬರುತ್ತಾಳೆ.

ವಿಷ್ಣುವರ್ಧನನ ಗೋಳಾಟ ಶಾಂತಲೆಯ ಇಲ್ಲದಿರುವಿಕೆಯನ್ನು ಸೂಚಿಸುತ್ತದೆ. ಅವನ ಸಂತೋಷಕ್ಕೆ ಕಾರಣವಾಗಿರುವುದು ಶಾಂತಲೆಯೆಂಬುದು ಸರ್ವವಿದಿತವಾಗಿದೆ. ವಿಷ್ಣುವರ್ಧನನ ಅಭಿವೃದ್ಧಿಗೆ ಶಾಂತಲೆಯ ಪಾತ್ರ ಪೂರಕವಾಗಿದೆ. ಹಾಗಾಗಿ ಶಾಂತಲೆಯ ಸಾಧನೆ ಪಾತ್ರ ನಮ್ಮ ಸಂಸ್ಕೃತಿಯಲ್ಲಿ ತ್ಯಾಗ, ಸಹನೆ, ಸಂಯಮ ಮೊದಲಾದ ಮೌಲ್ಯಗಳ ಪ್ರತಿನಿಧಿಯಂತೆ ಕಂಡುಬರುತ್ತದೆ. ಆದುದರಿಂದ ಅವಳ ವ್ಯಕ್ತಿತ್ವಕ್ಕೆ ಇಲ್ಲಿ ವಿಶೇಷ ಸ್ಥಾನವಿದೆ. ಹಾಗಾಗಿಯೇ ಶಾಂತಲೆ ತನ್ನ ಪತಿಯೊಂದಿಗೆ ಸಮಾನತೆಯಿಂದ ಪ್ರೀತಿಯಿಂದ ಬದುಕು ಸಾಗಿಸಿದ್ದನ್ನು ಗುರುತಿಸಬಹುದು. ಯಾವತ್ತೂ ಅವರಿಬ್ಬರಲ್ಲಿ ಬಿರುಕು ಉಂಟಾಗಿಲ್ಲದೆ ಇರುವುದು ಅವರ ದಾಂಪತ್ಯಕ್ಕೆ ಸಾಕ್ಷಿಯಾಗಿದೆ. ಇವರ ದಾಂಪತ್ಯದಲ್ಲಿ ಲೇಖಕರು ಹೃದಯ ಧರ್ಮಕ್ಕೆ ಹೆಚ್ಚು ಒತ್ತು ನೀಡುವ ಮೂಲಕ ಅವರ ಪ್ರೀತಿಯ ಅನುಬಂಧವನ್ನು ಕಟ್ಟಿಕೊಟ್ಟಿದ್ದಾರೆ.

ಸೂಕ್ಷ್ಮ ಸಂವೇದನಾಶೀಲಳಾದ ಶಾಂತಲೆ ವಿಷ್ಣುವರ್ಧನನ ಅಂತರಂಗದ ಸತ್ಯ ತಿಳಿದು ಆತ್ಮದ ಮೂಲಕ ಲಕ್ಷ್ಮೀಗೆ ಧಾರಣೆ ಆಗುವ ಸಂದರ್ಭ ಅವಳ ಜೀವನದಲ್ಲಿನ ಮತ್ತೊಂದು ಆಯಾಮವನ್ನಾಗಿ ಲೇಖಕರು ಕಟ್ಟಿಕೊಡುತ್ತಾರೆ. ಅದು ವಿಷ್ಣುವರ್ಧನನ ಮೇಲೆ ಗಾಢವೂ, ವ್ಯಾಪಕವೂ ಆದ ಪ್ರಜ್ವಲ ಪರಿಣಾಮವನ್ನುಂಟು ಮಾಡುತ್ತದೆ. ಶಾಂತಲೆ ತನ್ನ ಆತ್ಮೀಯ ವರ್ತನೆಯಿಂದ ವಿಷ್ಣುವರ್ಧನನನ್ನು ಕೀರ್ತಿಯ ಶಿಖರಕ್ಕೇರಿಸಿದ ವಿಶೇಷತೆಗೆ ಒಳಗಾಗುತ್ತಾಳೆ.

ವಿಷ್ಣುವರ್ಧನನಿಂದ ದೂರವಾಗಿ ಅವನ ಮನಸ್ಸನ್ನು ನೋಯಿಸಿದ ಶಾಂತಲೆ ಅವನ ಗೋಳಾಟ ಕಂಡು ಪುನಃ ಅವನ ಬಳಿ ಬರುವುದರಿಂದ ಅವಳಿಗೂ ಅವನ ಜೀವನದಲ್ಲಿ ಸ್ವತಂತ್ರ ಅಸ್ತಿತ್ವವಿದೆ ಎಂಬುದನ್ನು ಮನಗಾಣಿಸಲಾಗುತ್ತದೆ. ಹಾಗಾಗಿ ಕಾದಂಬರಿ ಇವರ ಸುಂದರ ದಾಂಪತ್ಯದ ಕಥೆಯಂತಿದೆ. ಇಲ್ಲಿ ಲೇಖಕರು ಅವರನ್ನು ಹೆಜ್ಜೆಹೆಜ್ಜೆಗೂ ನೆನೆಯುತ್ತಾ ಅವರ ಪಾತ್ರಕ್ಕೆ ನ್ಯಾಯ ದೊರಕಿಸಿಕೊಟ್ಟಿದ್ದಾರೆ.

ಶಾಂತಲೆ ತಾನು ಆತ್ಮಹತ್ಯೆಗೆ ಮುಂದಾಗುವುದು ಬಲಾತ್ಕಾರದಿಂದಲ್ಲ, ವೈಯಕ್ತಿಕ ಪ್ರಜ್ಞೆಯಿಂದ ಎಂಬುದು ಗಮನಿಸಬೇಕಾದ ಸಂಗತಿಯಾಗಿದೆ. ಆದರೆ ಲೇಖಕರು ಶಾಂತಲೆಯ ಬದುಕಿನ ಬಗೆಗೆ ಕಾಳಜಿ ತೋರಿಸುತ್ತಾರೆ. ಅವಳ ತ್ಯಾಗದ ಮಹೋನ್ನತಿಯನ್ನು ಅವಳ ಪ್ರತಿರೂಪವೆಂಬಂತೆ ಚಿತ್ರಿಸಿದ್ದಾರೆ. ಅವಳು ಗಂಡನ ಯೋಗಕ್ಷೇಮವನ್ನು ಸದಾ ಚಿಂತಿಸುತ್ತಿದ್ದಳು ಹಾಗಾಗಿಯೇ ಅವಳು ಆತ್ಮದ ರೂಪದಲ್ಲಿ ಬಂದಿದ್ದು ಎಂಬುದನ್ನು ಗಮನಿಸಬಹುದು. ಇದು ವಿಷ್ಣುವರ್ಧನನ ಬದುಕಿಗೆ, ಅವನ ನಿರಂತರ ವಿರಹಕ್ಕೆ, ಅನಂತ ನಿರೀಕ್ಷೆಗೆ ಶಾಂತಲೆಯ ಉಳಿವು ಎಷ್ಟು ಅಗತ್ಯವಾಗಿತ್ತೆಂಬುದನ್ನು ಸೂಚಿಸುತ್ತದೆ. ಶಾಂತಲೆ ಲಕ್ಷ್ಮೀಯ ದೇಹದಲ್ಲಿ ಅವಾಹನೆಯಾಗುವುದರಿಂದ ಸವತಿಯರಾದರೂ ಅಕ್ಕ–ತಂಗಿಯರ ಸಾಮರಸ್ಯದ ಅರಿವು ನಮಗಾಗುತ್ತದೆ. ಶಾಂತಲೆಯ ಸರ್ವಸಮರ್ಪಣ ಬುದ್ಧಿಯು ಇಲ್ಲಿ ಅನಾವರಣಗೊಳ್ಳುತ್ತದೆ. ವಿಷ್ಣುವರ್ಧನನಿಗಂತೂ ಅವಳು ಹತ್ತಿರವಿದ್ದರೆ ಏನೋ ನೆಮ್ಮದಿ, ಸುಖ, ಅವಳ ಮಾತುಗಳಿಂದ ತನ್ನೆಲ್ಲಾ ನೋವನ್ನು ಮರೆಯುವುದರಿಂದ ಅವನ ಬಾಳಿನಲ್ಲಿ ಅವಳ ಮಹತ್ವ ಎಷ್ಟಿತ್ತು ಎಂಬುದರ ಅರಿವಾಗುತ್ತದೆ.

ಶಾಂತಲೆಯ ಪಾತ್ರ ಸೃಷ್ಟಿಯಲ್ಲಿ ಸಾಮಾನ್ಯ, ಅಸಾಮಾನ್ಯ ಅಂಶಗಳೆರಡೂ ಮೇಳೈಸಿಕೊಂಡಿವೆ. ಶಾಂತಲೆಗಾಗಿ ವಿಷ್ಣುವರ್ಧನ ಕಣ್ಣೀರು ಸುರಿಸಿದ್ದನ್ನು ನೋಡಿದರೆ ಅವರ ದಾಂಪತ್ಯದ ಪರಿಚಯವಾಗುತ್ತದೆ. ಅವಳು ಕೊನೆಗೂ ಗಂಡನ ಸ್ಥಿತಿಗೆ ಮಣಿದು ಇಹಲೋಕಕ್ಕೆ ಆಗಮಿಸಿದ್ದು ಅಸಾಮಾನ್ಯವಾದರೂ ಸಾಮಾನ್ಯ ಸಂಗತಿಯಂತೆ ಕಂಡುಬರುತ್ತದೆ. ಯಾವ ಗಂಡ ತಾನೇ ಹೆಂಡತಿಯ ಸಾವನ್ನು ಸ್ವಾಗತಿಸುತ್ತಾನೆ? ಹಾಗೆಯೇ ಗಂಡ ಜೀವಂತವಿರುವಾಗಲೇ ಶಾಂತಲೆ ಆತ್ಮಹತ್ಯೆ ಮಾಡಿಕೊಂಡಿದ್ದರಿಂದ ಅವನ ರೋದನ, ಆಕ್ರಂದನ ಮುಗಿಲು ಮುಟ್ಟುತ್ತದೆ. ಹಾಗಾಗಿಯೇ ಶಾಂತಲೆ ಅವನ ಹೃದಯದ ಕರೆಗೆ ಓಗೊಟ್ಟು ಮತ್ತೊಮ್ಮೆ ಅವನನ್ನು ಸೇರುತ್ತಾಳೆ. ಇದು ಅವರಿಬ್ಬರ ಸೌಹಾರ್ದತೆಗೆ ಸಾಕ್ಷಿಯಾಗಿದೆ. ಶಾಂತಲೆ ಕೂಡ ಆತ್ಮಹತ್ಯೆ ಮಾಡಿಕೊಂಡು ಆತ್ಮ ನಾಶ ಮಾಡಿಕೊಂಡಿದ್ದಕ್ಕಾಗಿ ಪಶ್ಚಾತ್ತಾಪ ಪಡುತ್ತಾಳೆ. ಇವರಿಬ್ಬರಿಗೂ ಅಷ್ಟು ವಿಶ್ವಾಸ ಒಬ್ಬರ ಮೇಲೆ ಒಬ್ಬರಿಗಿರುವುದು ವ್ಯಕ್ತವಾಗುತ್ತದೆ. ಅವರ ಸಂಸಾರ ಹಾಲು–ಜೇನಿನಂತಿತ್ತು. ಕಾದಂಬರಿಯುದ್ದಕ್ಕೂ ಗಂಡನಿಗೆ ತಕ್ಕ ಹೆಂಡತಿಯಾಗಿ ಮೂಡಿಬಂದಿದ್ದು ನಮ್ಮ ಧರ್ಮದ ಸ್ತ್ರೀಯ ಪ್ರತೀಕದಂತೆ ಕಂಡುಬರುತ್ತಾಳೆ.

ಶಾಂತಲೆಗೆ ತನ್ನ ಮೇಲೆ ಪ್ರೀತಿ, ಮಾನವೀಯ ಅನುಭವ ತೋರಿಸಿದ ರಾಜಮಾತೆ ಮತ್ತು ಹೊಯ್ಸಳ ಸಾಮ್ರಾಜ್ಯದ ಭವಿಷ್ಯತ್ತಿನ ಮೇಲೆ ಎಚ್ಚರ ವಹಿಸಿದ್ದರಿಂದ ಅವಳ ಸುಪ್ತ ಮನಸ್ಸಿನ ಭಾವನೆಗಳು ಸಾವಿನ ರೂಪದಲ್ಲಿ ಪ್ರಕಟಗೊಳ್ಳುತ್ತವೆ. ಅವಳಿಗೆ ರಾಜ್ಯದ ಮತ್ತು ವಿಷ್ಣುವರ್ಧನ ಹಿತಾಸಕ್ತಿ ಮಾತ್ರ ಇತ್ತು ಎಂಬುದು ಗಮನಿಸಬೇಕಾದ ಸಂಗತಿ. ಅವಳ ಉದ್ದೇಶದಲ್ಲಿ ಮೂಲತಃ ಯಾವ ದೋಷವಿರದಿದ್ದರೂ ಆ ಉದ್ದೇಶದ ಪರಿಣಾಮ ಮಾತ್ರ ಭೀಕರವಾಗಿದ್ದನ್ನು ಕಾದಂಬರಿ ಕಟ್ಟಿಕೊಡುತ್ತದೆ. ಅವಳ ಸಾವಿನ ನಿರ್ಧಾರ ಅವಳ ಮನಸ್ಸಿಗೆ ನೋವಾಗುವುದಿಲ್ಲ ಬದಲಿಗೆ ವಚನ ಪಾಲನೆಯಾಗುತ್ತಿದೆ ಎಂದು ನಿರಾತಂಕವಾಗಿ ತನ್ನ ಆತ್ಮವನ್ನು ನಾಶ ಮಾಡಿಕೊಳ್ಳುತ್ತಾಳೆ. ಆದರೆ ವಿಷ್ಣುವರ್ಧನನ ಆಕ್ರಂದನ ಅವಳಲ್ಲಿ ಬದುಕುವ ಆಸೆಯನ್ನು ಮೂಡಿಸುತ್ತದೆ. ಆತ್ಮದ ರೂಪದಲ್ಲಿ ಬಂದ ಶಾಂತಲೆ ತನ್ನ ಸಲಹೆಯನ್ನು ಮತ್ತೊಮ್ಮೆ ಪ್ರಾರ್ಥಿಸುತ್ತಾಳೆ. ಶಾಂತಲೆಯ ವ್ಯಕ್ತಿತ್ವದ ಪ್ರಭಾವಕ್ಕೆ ಒಳಗಾಗಿದ್ದ ವಿಷ್ಣುವರ್ಧನ ಅವಳ ಮನಸ್ಸಿನ ತುಮುಲಗಳನ್ನು ಗ್ರಹಿಸಿ ಅವಳ ಮನಸ್ಸನ್ನು ತಿಳಿಗೊಳಿಸುತ್ತಾನೆ. ಮುಂದೆ ಏನು ಮಾಡಬೇಕೋ ಎಂದು ಗೊತ್ತಾಗದ ಸ್ಥಿತಿಯಲ್ಲಿದ್ದ ವಿಷ್ಣುವರ್ಧನನಿಗೆ ಸೂಕ್ತ ಮಾರ್ಗದರ್ಶನ ಮಾಡುವ ಮೂಲಕ ಮಾರ್ಗದರ್ಶಕಿಯಾಗಿ ತೋರಿಬರುತ್ತಾಳೆ. ಇಲ್ಲಿ ಅವನ ದೈನ್ಯತೆಯ ಮುಂದೆ ಶಾಂತಲೆಗೆ ತನ್ನಂತರಂಗವನ್ನು ಮರೆಮಾಚಲು ಸಾಧ್ಯವಾಗುವುದಿಲ್ಲ ಇವರಿಬ್ಬರ ನಿರ್ವ್ಯಾಜ ಪ್ರೀತಿಯನ್ನು ಇಲ್ಲಿ ಕಾಣಬಹುದು.

ಹಾಗೆಯೇ ಸದ್ಗುಣಗಳ ಖಣಿಯಾದ ಶಾಂತಲೆಗೆ ಲಕ್ಷ್ಮೀಯ ಯೋಗಕ್ಷೇಮದ ಜವಾಬ್ದಾರಿ ವಹಿಸುತ್ತಾನೆ. ಇಲ್ಲಿ ಲಕ್ಷ್ಮೀ ಶಾಂತಲೆಯ ಬಾಂಧವ್ಯ ಹೇಗೆ ಸೌಹಾರ್ದಯುತವಾಗಿತ್ತು ಎಂಬುದು ಗೊತ್ತಾಗುತ್ತದೆ. ಹೆಣ್ಣನ್ನು ಹೆಣ್ಣೇ ಅರ್ಥಮಾಡಿಕೊಳ್ಳಬಲ್ಲಳು ಎಂಬುದಕ್ಕೆ ಇವರಿಬ್ಬರೂ ಸಾಕ್ಷಿಯಾಗಿ ನಿಲ್ಲುತ್ತಾರೆ. ವಿಷ್ಣುವರ್ಧನನ ನೆಚ್ಚಿನ ಮಡದಿಯಾಗಿ ಶಾಂತಲೆ ಅವನ ಬಗ್ಗೆ ಮತ್ತು ಹೊಯ್ಸಳ ಸಾಮ್ರಾಜ್ಯದ ಬಗೆಗೆ ಕಾಳಜಿ ತೋರಿ ತನ್ನನ್ನೇ ಬಲಿ ಕೊಡಲು ಹಿಂದೆಗೆಯದ ತ್ಯಾಗಿಯಾಗಿ ಎಲ್ಲರ ಏಳಿಗೆ ಬಯಸುವ ಮಾತೃ ಹೃದಯಿಯಾಗಿ ಮೂಡಿ ಬಂದಿದ್ದಾಳೆ. ಕೊನೆಗೂ ತನ್ನ ಪ್ರಾಣವನ್ನು ಅರ್ಪಿಸಿ, ತನ್ನ ಸಾಮ್ರಾಜ್ಯದ ಭವಿಷ್ಯದ ಏಳಿಗೆಗೆ ಕಾರಣಕರ್ತಳಾಗಿದ್ದಾಳೆ. ವಿಷ್ಣುವರ್ಧನನ ಜೀವಸೆಲೆಯಾಗಿ ಗುರುತಿಸಲ್ಪಡುತ್ತಾಳೆ. ಇಲ್ಲಿ ಅವಳ ಪ್ರೀತಿ, ವಾತ್ಸಲ್ಯದ ಸ್ವರೂಪವನ್ನು ತಾಳಿದೆ. ಲೇಖಕರು ಶಾಂತಲೆಯ ಪಾತ್ರದಲ್ಲಿ ಲೌಕಿಕ ಮತ್ತು ಆಧ್ಯಾತ್ಮಿಕಗಳೆರಡನ್ನೂ ಮೇಳೈಸಿರುವುದನ್ನು ಗುರುತಿಸಬಹುದು. ಶಾಂತಲೆಯ ಆತ್ಮ ಪುನರ್ ರೂಪ ಪಡೆದಿದ್ದನ್ನು ಗಮನಿಸಿದರೆ ಶಾಂತಲೆಗೆ ಸಾಮ್ರಾಜ್ಯದ ಭವಿಷ್ಯಕ್ಕಿಂತ ವಿಷ್ಣುವರ್ಧನನ ಮೇಲಿನ ಅಭಿಮಾನ ಪ್ರೀತಿಯೇ ಮುಖ್ಯವಾಗಿತ್ತು ಎಂಬುದು ವೇದ್ಯವಾಗುತ್ತದೆ. ಒಬ್ಬ ಹೆಣ್ಣು ಇನ್ನೊಬ್ಬ ಹೆಣ್ಣಿನ ನೋವನ್ನು ಅರ್ಥಮಾಡಿಕೊಳ್ಳಲು ಸಾಧ್ಯ. ಅದರಂತೆ ಕಾದಂಬರಿಯುದ್ದಕ್ಕೂ ಲಕ್ಷ್ಮೀಯ ಸ್ನೇಹಿತೆಯಾಗಿ, ಒಡನಾಡಿಯಾಗಿ, ಜೊತೆಗಾರ್ತಿಯಾಗಿ, ಅವಳನ್ನು ಅರ್ಥಮಾಡಿಕೊಂಡು ಅದಕ್ಕೆ ಸ್ಪಂದಿಸಿ ಅವಳನ್ನು ಸಾಂತ್ವನಗೈಯುವ, ಅನವರತವೂ ಧೈರ್ಯ, ಆತ್ಮವಿಶ್ವಾಸವನ್ನು ತುಂಬುವ ಪಾತ್ರವಾಗಿ ಶಾಂತಲೆ ಕಂಡುಬರುತ್ತಾಳೆ. ಶಾಂತಲೆಯ ವ್ಯಕ್ತಿತ್ವ ಇಲ್ಲಿ ಪ್ರಜ್ಞಾಪೂರ್ಣವಾಗಿದೆ. ಇಂಥ ಶಾಂತಲೆಯ ಒಳ್ಳೆಯ ಗುಣಗಳು ನಿಜಕ್ಕೂ ಪ್ರಶಂಸಾರ್ಹವಾಗಿವೆ.

ಶಾಂತಲೆಗೆ ಬಿದ್ದ ಕನಸೊಂದನ್ನು ಮನೋವೈಜ್ಞಾನಿಕ ಹಿನ್ನೆಲೆಯಲ್ಲಿ ನೋಡಬಹುದಾಗಿದೆ. ತನಗೆ ಮಕ್ಕಳಾಗುವುದಿಲ್ಲವೆಂದು ಮನಸ್ಸಿನಲ್ಲಿ ಅಡಗಿದ್ದ ಸುಪ್ತ ಭಾವನೆಗಳು ಕನಸಿನೋಪಾದಿಯಲ್ಲಿ ಕಾಣಿಸಿಕೊಳ್ಳುತ್ತವೆ. ಹಾಗಾಗಿ ಸಾಮ್ರಾಜ್ಯದ ಒಳಿತಿಗಾಗಿ ಭಯಭೀತವಾದ ಮನೋವ್ಯಥೆಯಿಂದಾಗಿ ಶಾಂತಲೆ ಆತ್ಮಹತ್ಯೆಗೆ ಮುಂದಾಗುವುದು ಆತಂಕಕ್ಕೆಡೆ ಮಾಡುತ್ತದೆ. ಇಲ್ಲಿ ಶಾಂತಲೆ ಆತ್ಮಸ್ಥೈರ್ಯ ಇಲ್ಲದವಳಾಗಿ ಕಂಡುಬರುತ್ತಾಳೆ. ಆದರೆ ವಿಷ್ಣುವರ್ಧನನು ಜೀವದಿಂದುಳಿಯುವಂತೆ ಮಾಡಿದ ಯಶಸ್ಸು ಇವಳಿಗೆ ಸಲ್ಲುತ್ತದೆ.

ಸೌಮ್ಯ ಸ್ವಭಾವದವಳಾದ ಶಾಂತಲೆ ಹೊಯ್ಸಳ ರಾಜ್ಯವನ್ನು ಕಾಯುವವಳು, ಸದಾ ರಾಜ್ಯದ ಹಿತಚಿಂತಕಳು, ರಕ್ಷಕಳು, ಅಷ್ಟೇ ಅಲ್ಲ ಅದರ ಕ್ಷೇಮ ಪಾಲಕಳೂ ಆಗಿದ್ದಾಳೆ. ಶಾಂತಲೆಯ ಪಾತ್ರ ಜೀವಂತಿಕೆಯಿಂದ ಕೂಡಿದ್ದು ಮಾನವೀಯ ಅನುಕಂಪಗಳ ಗಣಿಯಾಗಿದ್ದಾಳೆ. ಪ್ರೀತಿಯ ಪ್ರತೀಕವಾದ ಶಾಂತಲೆ ತ್ಯಾಗದ ಮಹೋನ್ನತ ಶಿಖರವನ್ನೇರಿರುವುದು ಇಲ್ಲಿನ ವಿಶೇಷವಾಗಿದೆ. ಅವಳನ್ನು ತ್ಯಾಗದ ಪ್ರತಿರೂಪವನ್ನಾಗಿ ಚಿತ್ರಿಸುವುದರಲ್ಲಿ ಲೇಖಕರ ವಿಶೇಷ ಆಸಕ್ತಿಯಿರುವುದನ್ನು ಗುರುತಿಸಬಹುದು.

**ಪರಾಮರ್ಶನ ಗ್ರಂಥಗಳು**

1. ಮಳಲಿ ವಸಂತಕುಮಾರ (ಸಂ) – ಹೊಯ್ಸಳಸಂಪದ, ಸ್ವಾಗತ ಸಮಿತಿ, ಅಖಿಲ ಭಾರತ ೬೫ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಹಾಸನ, ೧೯೯೬

2. ಮೇವುಂಡಿ ಮಲ್ಲಾರಿ – ಕನ್ನಡ ನಾಡಿನ ಶಾಸನ ಕವಿಗಳು, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೩
3. ಶಾಮರಾಯ ತ.ಸು. –ಕನ್ನಡ ಸಾಹಿತ್ಯ ಚರಿತ್ರೆ, ತುಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು, ೨೦೦೬
4. ಅಣ್ಣಿಗೇರಿ ಎ.ಎಂ., ಮೇವುಂಡಿ ಮಲ್ಲಾರಿ (ಸಂ) – ಶಾಸನ ಸಂಗ್ರಹ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೨.
5. ಅಶೋಕ ಟಿ.ಪಿ. – ಸಾಹಿತ್ಯ ಸಂಬಂಧ, ಅಕ್ಷರ ಪ್ರಕಾಶನ, ಸಾಗರ, ೨೦೦೮
6. ಅಶೋಕ ಟಿ.ಪಿ. – ಸಾಹಿತ್ಯ ಸಂದರ್ಭ, ಅಕ್ಷರ ಪ್ರಕಾಶನ, ೧೯೯೧
7. ಆಮೂರ ಜಿ.ಎಸ್.– ಕಾದಂಬರಿ ಸ್ವರೂಪ (ಹೊಸ ಚಿಂತನೆ), ಕನ್ನಡ ಸಂಘ, ಬೆಂಗಳೂರು ೧೯೯೯
8. ಕಲಬುರ್ಗಿ ಎಂ.ಎಂ. – ಸಮಾಧಿ ಬಲಿದಾನ–ವೀರಮರಣ ಸ್ಮಾರಕಗಳು, ಐ.ಬಿ.ಹೆಚ್ ಪ್ರಕಾಶನ ಬೆಂಗಳೂರು, ೧೯೮೦
9. ಕೀರ್ತಿನಾಥ ಕುರ್ತಕೋಟಿ – ವಿಮರ್ಶೆಯ ವಿನಯ ಕಾದಂಬರಿ, ಮನೋಹರ ಗ್ರಂಥಮಾಲ, ಧಾರವಾಡ ೧೯೯೬
10. ಕೃಷ್ಣಮೂರ್ತಿ ಬಿ. – ಸಾಹಿತ್ಯ ಮತ್ತು ಮನೋ ವಿಜ್ಞಾನ, ಕರ್ನಾಟಕ ಸಾಹಿತ್ಯ ಅಕಾಡೆಮಿ
11. ಬೆಂಗಳೂರು, ೨೦೦೦.
12. ಚಿದಾನಂದಮೂರ್ತಿ ಎಂ. – ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸ್ವಪ್ನಬುಕ್ ಹೌಸ್, ಬೆಂಗಳೂರು, ೨೦೦೮